ಲಿಂಗ ಪರಿವರ್ತನೆಯ ಶಸ್ತ್ರಚಿಕಿತ್ಸೆಯ ಮುಖೇನ ಹಲವು ಪುರುಷ ಮುಖಗಳು ಸ್ತ್ರೀ ಮುಖಗಳಾಗಿ ಒಂದೇ ಬದುಕಿನಲ್ಲಿ ಎರಡೂ ಲಿಂಗದೊಂದಿಗೆ ಮುಖಾಮುಖಿಯಾಗುವರು.

ಹಲವು ಮುಖಗಳನ್ನು ಹೊಂದಿದ ದೇವಾನುದೇವತೆಗಳಲ್ಲಿ ಚತುರ್ಮುಖ ಬ್ರಹ್ಮನಿಗೆ ಮೊದಲು ಐದು ಮುಖಗಳಿದ್ದವೆಂದು ಹೇಳಲಾಗಿದೆ. ಐದನೆಯ ಮುಖ ಆಕಾಶದೆಡೆಗೆ ನೋಡುತ್ತಾ ತಾನೇ ಸರ್ವೋಚ್ಛ ದೇವರೆಂದು ಘೋಷಿಸಿದಾಗ ಶಿವ ಕೋಪದಿಂದ ಆ ಮುಖವನ್ನು ಛೇದಿಸಿದನು. ಶಿವನಿಗೂ ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ ಎಂಬ ಐದು ಮುಖಗಳಿರುವ ಬಗ್ಗೆ ಉಲ್ಲೇಖವಿದೆ. ಶಿವನ ಅನುಗ್ರಹದಿಂದ ಹತ್ತು ಮುಖಗಳನ್ನು ಹೊಂದಿದ್ದ ರಾವಣ ದಶಮುಖನಾಗಿದ್ದನು. ಆದರೆ ಅತ್ತ ಶಿವನ ಪುತ್ರ ಗಣೇಶ ಇದ್ದೊಂದು ಮುಖವನ್ನೂ ಕಳೆದುಕೊಂಡು ಕೊನೆಗೆ ಗಜಮುಖನಾದ. ಆ ಕರಿಮುಖದಲ್ಲೇ ಮುರಿದ ದಂತದೊಂದಿಗೆ ಸೊಂಡಿಲನ್ನು ಎಡಕ್ಕೂ ಬಲಕ್ಕೂ ತಿರುಗಿಸುತ್ತಾ ಎಡಮುರಿ ಬಲಮುರಿ ಗಣಪನಾಗಿರುವನು.

ಮುಖ ನೋಡಿಯೇ ಒಬ್ಬ ವ್ಯಕ್ತಿ ಯಾವ ಪ್ರಾಂತ್ಯದವನೆಂದು ಗುರುತಿಸಬಹುದು. ಆಫ್ರಿಕಾ, ಚೀನಾದವರ ಮುಖ, ಕೂದಲು, ಕಣ್ಣುಗಳು ಭಿನ್ನವಾಗಿರುತ್ತವೆ. ಮುಖದ ಭೌಗೋಳಿಕ ಗಡಿರೇಖೆಗೆ ತಕ್ಕಂತೆ ಅದನ್ನು ಗುಂಡು ಮುಖ, ಉದ್ದ ಮುಖ, ಅಂಡಾಕಾರ, ಹೃದಯಾಕಾರ, ಚೌಕಾಕಾರ ಎಂದು ವಿಂಗಡಿಸಲಾಗುವುದು. ಈ ವಿಂಗಡಣೆ ಸೌಂದರ್ಯತಜ್ಞರಿಗೆ ತಿದ್ದುಪಡಿ ಮಾಡಲು ಅನುಕೂಲ. ಕನ್ನಡಕ ಕೊಳ್ಳುವ ಸಮಯ ಮುಖದ ಜಾಮಿಟ್ರಿಕಲ್ ಫಿಗರ್‌ಗೆ ತಕ್ಕಂತೆ ಅದರ ಫ್ರೇಮನ್ನು ಆಯ್ಕೆ ಮಾಡಲಾಗುವುದು.

ನಾಚಿಕೆ, ಮುಖಭಂಗವಾದಾಗ ಮುಖ ತಾನೇ ತಾನಾಗಿ ಕೆಳಬಾಗಿಬಿಡುವುದು. ತಲೆಯೆತ್ತಿ ನಡೆಯುವುದು ಆತ್ಮವಿಶ್ವಾಸದ ಪ್ರತೀಕ. ಕೆಟ್ಟ ಕೆಲಸಗಳನ್ನು ಮಾಡಿದವರಿಗೆ 'ಯಾವ ಮುಖ ಹೊತ್ಕೊಂಡು ಓಡಾಡ್ತಾನೆ ಅವ...?' ಎನ್ನುವುದಿದೆ. ಜಗಳ, ವಾಗ್ಯುದ್ಧಗಳು ನಡೆದ ನಂತರ ಕದನ ವಿರಾಮದಲ್ಲೂ ಬೈಗುಳಗಳು ತೊಟ್ಟಿಕ್ಕುವಾಗ ಸಾಮಾನ್ಯವಾಗಿ ಕೇಳಿಬರುವ ಮಾತು 'ಅವ್ನ ಮುಖದ ನೀರಿಳಿಸಿಬಿಟ್ಟೆ!' ಎಂದು. ತಪ್ಪು ಮಾಡಿದವರು ಮುಖ ಕೊಟ್ಟು ಮಾತನಾಡಲು ಹಿಂಜರಿಯುವರು. ಕಾನೂನುಬಾಹಿರ ಕೆಲಸಗಳನ್ನು ಮಾಡಿದವರನ್ನು ಪೊಲೀಸರು ಅರೆಸ್ಟ್ ಮಾಡಿದಾಗ ಅವರು ಮುಖವನ್ನು ಬಗ್ಗಿಸಿಯೋ, ಮರೆಮಾಚಿಕೊಂಡೋ ಹೋಗುವುದಿದೆ. ಕೊರೊನಾ ಸಮಯದಿ ಎಣ್ಣೆ ಅಂಗಡಿಯ ಮುಂದಿದ್ದ ಸರತಿ ಸಾಲಿನಲ್ಲಿ ಹೀಗೆ ಹಲವು ಚಹರೆಗಳು ವೇಲ್‌ನಿಂದ ಮುಚ್ಚಿಹೋಗಿದ್ದವು.

ಷೇರು ಮಾರುಕಟ್ಟೆಯಲ್ಲಿ ಮುಖಬೆಲೆ ಹಾಗು ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಲಾಭನಷ್ಟದ ಅಂಕಿ ಸಂಖ್ಯೆಗಳು ನಿರ್ಧಾರವಾಗುವುದು. ಸ್ಮಾರ್ಟ್‌ಫೋನ್ ಆವಿಷ್ಕಾರದ ನಂತರ ಜಂಗಮವಾಣಿ ಮುಖವಾಣಿಯಾಗಿಯೂ ಬದಲಾಯಿತು. ಫೇಸ್‌ಬುಕ್ ಎಂಬ ಮಾಯಾಲೋಕದಲ್ಲಿ ಹಲವು ಮುಖರಹಿತ ಖಾತೆಗಳಿರುತ್ತವೆ. ಹೆಣ್ಣುಮಕ್ಕಳನ್ನು ಯಾಮಾರಿಸಲು ಕೆಲವು ಪುರುಷ ಪ್ರೊಫೈಲ್‌ಗಳು ಹೆಣ್ಣಿನ ಮುಖ ಧರಿಸುತ್ತವೆ. ಸುಂದರವಾದ ಹೆಣ್ಣಿನ ಪಟವನ್ನು ತಮ್ಮ ವಾಲ್‌ನಲ್ಲಿ ಪ್ರದರ್ಶಿಸುತ್ತಾ ಹಲವು ಯುವತಿಯರ ಸ್ನೇಹ ಸಂಪಾದಿಸಿ ಕೊನೆಗೆ ತಮ್ಮ ಚಾಳಿಯನ್ನು ಶುರುವಿಡುತ್ತವೆ. ಎಚ್ಚೆತ್ತ ಮಹಿಳೆಯರು ಅವರನ್ನು ಬ್ಲಾಕ್ ಮಾಡಿ ಬ್ಲ್ಯಾಕ್ ಲಿಸ್ಟ್‌ಗೆ ತಳ್ಳಿದರೆ, ಮುಗ್ಧ ಹೆಣ್ಣುಮಕ್ಕಳು ಬಲಿಯಾದದ್ದೂ ಇದೆ.

'ಫೇಸ್ ಈಸ್ ದಿ ಇಂಡೆಕ್ಸ್ ಆಫ್ ಮೈಂಡ್' ಎಂಬಂತೆ ಮುಖದಲ್ಲಿ ಮೂಡುವ ಸೂಕ್ಷ್ಮ ಬದಲಾವಣೆಗಳು ಅನೇಕ ಭಾವಗಳನ್ನು ಬಿಂಬಿಸುತ್ತವೆ. ಬಹುಶಃ ಇದು ಇಮೋಜಿಗಳ ಹುಟ್ಟಿಗೂ ಕಾರಣವಾಗಿರಬಹುದು. ಆದರೆ ಸಾಂಕೇತಿಕವಾಗಿ ಹರಿಯಬಿಡುವ ಇಮೋಜಿಗಳ ಹಿಂದಿನ ಭಾವದ ಋಜುತ್ವವನ್ನು ರುಜುವಾತು ಮಾಡುವುದು ಕಷ್ಟ. ಎಷ್ಟೋ ಬಾರಿ ಹಸುವಿನಂತಹ ಮುಖದ ಹಿಂದೆ ವ್ಯಾಘ್ರನ ಗುಣಗಳೂ ಇರಬಹುದು. ಅದಕ್ಕೇ 'ಮುತ್ತಣ್ಣ' ಚಿತ್ರದ ಗೀತೆಯಲ್ಲಿ 'ಮುಖ ನೋಡಿ ಮೊಳ ಹಾಕಬೇಡ... ಗುಣ ನೋಡಿ ಅಳೆಯಮ್ಮ...' ಎಂದು ಎಚ್ಚರಿಸಿರುವರು.

ಪುಸ್ತಕದ ಪುಟಗಳನ್ನು ತೆರೆದಷ್ಟು ಸುಲಭವಾಗಿ ವ್ಯಕ್ತಿಯ ಮನಸ್ಸನ್ನು ಓದಲಾಗದು. 'ಡೋಂಟ್ ಜಡ್ಜ್ ಎ ಬುಕ್ ಬೈ ಇಟ್ಸ್ ಕವರ್' ಎಂಬಂತೆ ಒಂದು ಕೃತಿಯನ್ನು ಕೊಳ್ಳುವ ಸಮಯ ಹಲವರು ಮುಖಪುಟದ ಅಂದ ಚೆಂದವನ್ನು ನೋಡಿಕೊಳ್ಳುವುದಿದೆ. ಆದರೆ ಎಷ್ಟೋ ಬಾರಿ ಆಕರ್ಷಕ ಮುಖಪುಟದ ಕೃತಿಯೊಳಗೆ ನೀರಸ ಕಂಟೆಂಟ್ ಇರಬಹುದು. ಇತ್ತೀಚೆಗೆ ಕೆಲವು ವಿಶೇಷಾಂಕಗಳ ಮುಖಪುಟಗಳು ಮರಿ ಹಾಕಿದಂತೆ ಎರಡೆರಡು ಪದರಗಳನ್ನು ಹೊಂದಿರುತ್ತವೆ. ಒಂದನ್ನು ತೆಗೆದರೆ ಅದರಲ್ಲಿ ಮತ್ತೊಂದು ಅಂಟಿಕೊಂಡು ದ್ವಿಕಳತ್ರ ಯೋಗದಂತೆ ಓದುಗರಿಗೆ ದ್ವಿಪುಟತ್ವ ಯೋಗವನ್ನು ಒದಗಿಸಿಕೊಡುತ್ತವೆ. ಜಾದೂ ಮಾಡುವವ ಇಸ್ಪೀಟ್ ಎಲೆ ಕಲೆಸಿ ಮೇಲೆತ್ತಿದಾಗ ಒಂದಕ್ಕೊಂದು ಅಂಟಿಕೊಂಡಿರುವಂತೆ ಮುಖಪುಟದ ಪಟವೂ ಅಂಟಿಕೊಂಡು ಬಿಡಿಸಿದಾಗ ಸೇವಂತಿ ಎಂಎಂಗೆ ವಿಸ್ತರಿಸುತ್ತದೆ. ಇದರಿಂದ ಓದುವಾಗ ಕಿರಿಕಿರಿಯಾಗುವುದರ ಜೊತೆಗೆ ಅತ್ತಿತ್ತ ಮಗುಚಾಡಿ ಓದಿ ಮುಗಿಸುವ ಹೊತ್ತಿಗೆ ಮುಖಪುಟ ಹೊತ್ತಿಗೆಯೊಂದಿಗಿನ ಬಂಧ ಕಳಚಿಕೊಂಡಿರುತ್ತದೆ.

ಅಂಬಿಗರ ಚೌಡಯ್ಯನವರು ನಮ್ಮ ಅಂತರಂಗ ಹಾಗೂ ಬಹಿರಂಗದ ಆವರಣಗಳನ್ನು ರಕ್ಷಣೆ ಮಾಡುವ ಎಂಟು ಮುಖಗಳನ್ನು ವಿವರಿಸುವರು. 'ಗುರುವೇ ಒಂದು ಮುಖ, ಲಿಂಗವೇ ಎರಡು ಮುಖ ಜಂಗಮವೇ ಮೂರು ಮುಖ ಪಾದೋದಕವೇ ನಾಲ್ಕು ಮುಖ ಪ್ರಸಾದವೇ ಐದು ಮುಖ ವಿಭೂತಿಯೇ ಆರು ಮುಖ ರುದ್ರಾಕ್ಷಿಯೇ ಏಳು ಮುಖ ಮಂತ್ರವೇ ಎಂಟು ಮುಖ...' ಹೀಗೆ ಅವರವರ ಭಾವಕ್ಕೆ ಅವರವರ ಭಕುತಿಗೆ ಮುಖದ ವ್ಯಾಖ್ಯಾನವು ಭಿನ್ನವಾಗುತ್ತಾ ಹೋಗುವುದು.

ಮುಖ ಹೇಗೇ ಇರಲಿ – ಬದುಕಿಗೆ ವಿಮುಖರಾಗದಂತೆ, ಸಹಜೀವಿಗಳು ಮುಖಾಮುಖಿಯಾದಾಗ ಪರಸ್ಪರ ಮುಖ ತಿರುಗಿಸದೆ ಮುಖವಾಡವಿಲ್ಲದೆ, ಸಾಮರಸ್ಯದಿಂದ ಬದುಕಿದಾಗ ಎಲ್ಲರ ಮುಖಕ್ಕೂ ಒಂದು ಬೆಲೆ ಬರುವುದು.

ಪ್ರತಿಕ್ರಿಯಿಸಿ: **feedback@sudha.co.in**

